■ ಹನಿ

## ಗೇಟ್-ಪಾಸ್?



ಮೈಕ್ರೊಸಾಫ್ಟ್ ಕಂಪೆನಿಯ ಚೇರ್‌ಮನ್ ಹುದ್ದೆಯಿಂದ ಬಿಲ್ ಗೇಟ್ಸ್ ಹೊರಹೋದರೆ, ಕಂಪೆನಿಯ ಷೇರುದಾರರು ಉದ್ಧಾರವಾಗುತ್ತಾರೆಯೆ?

'ಹೌದು, ಬಿಲ್ ಗೇಟ್ಸ್ ಚೇರ್‌ಮನ್ ಹುದ್ದೆ ತ್ಯಜಿಸಲಿ' ಎಂದು ಕಂಪೆನಿಯ ಮೂವರು ಪ್ರಮುಖ ಹೂಡಿಕೆದಾರರು ಒತ್ತಡ ಹೇರಿದ್ದಾರಂತೆ. ಷೇರುದಾರರ ಸಭೆಯಲ್ಲಿ ಈ ಬಗ್ಗೆ ಬಿಸಿ ಚರ್ಚೆ ನಡೆದಿದೆಯಂತೆ.

ಬಿಲ್ ಗೇಟ್ಸ್ ಇಲ್ಲದ ಮೈಕ್ರೊಸಾಫ್ಟ್‌ಅನ್ನು ಕಲ್ಪಿಸಿಕೊಳ್ಳುವುದೂ ಕಷ್ಟ ಎನ್ನುವುದು ಉದ್ಯಮ ವಲಯದ ಅನ್ನಿಸಿಕೆ. ಆದರೆ 'ಬಿಲ್ ಗೇಟ್ಸ್ ಮತ್ತು ಅವರ ಕೈಗೊಂಬೆಯಾಗಿರುವ ಸಿಇಓ ಸ್ಟೀವ್ ಬಾಲ್ಮರ್ ಇಬ್ಬರೂ ಇರುವಾಗ ಕಂಪೆನಿ ಹೊಸ ರೀತಿಯ ಮಾರುಕಟ್ಟೆ ತಂತ್ರಗಳನ್ನು ರೂಪಿಸಲು ಸಾಧ್ಯವಿಲ್ಲ. ಅದೇ ಹಳೇ ದಾರಿಯಲ್ಲಿ ಕಂಪೆನಿ ಸಾಗಿದರೆ ಷೇರುದಾರರು ಅತ್ಯಧಿಕ ಲಾಭ ಪಡೆಯಲು ಆಗುವುದಿಲ್ಲ' ಎನ್ನುವುದು ದೂರು.

ಸ್ಟೀವ್ ಬಾಲ್ಮರ್ ಹುದ್ದೆ ಬಿಡಲು ತಯಾರಿದ್ದಾರೆ. 'ನನ್ನ ಹುದ್ದೆಗೆ ಹೊಸಬರನ್ನು ಹುಡುಕಿ. ಕೆಲವು ತಿಂಗಳಲ್ಲಿ ನಾನು ಹೊರನಡೆಯುತ್ತೇನೆ' ಎಂದು ಅವರು ಘೋಷಿಸಿ ಎರಡು ತಿಂಗಳಾಗಿವೆ. ಗೇಟ್ಸ್ ಬಳಿ ಈಗ ಕಂಪೆನಿಯ ಶೇಕಡಾ 4.5ರಷ್ಟು ಷೇರುಗಳಿವೆ. ಇವರ ಪದಚ್ಯುತಿಗೆ ಯತ್ನಿಸುವ ಮೂವರು ಹೂಡಿಕೆದಾರರ ಬಳಿ ಒಟ್ಟು ಶೇಕಡಾ 5ರಷ್ಟು ಷೇರುಗಳು ಇವೆ.

ಆದರೆ ಬಿಲ್ ಗೇಟ್ಸ್ ಮೈಕ್ರೊಸಾಫ್ಟ್ ಕಂಪೆನಿಯ ಸಹಸ್ಥಾಪಕ. ಅವರನ್ನು ಹೊರಹಾಕುವುದು ಅಷ್ಟು ಸುಲಭವಲ್ಲ. ಏಕೆಂದರೆ ಕಂಪೆನಿಯ ಹೊಸ ಚೇರ್‌ಮನ್ ಮತ್ತು ಸಿಇಓ ಆಯ್ಕೆಯಲ್ಲಿ ಗೇಟ್ಸ್‌ಗೆ ವೀಟೊ ಅಧಿಕಾರವಿದೆ. ಅದೇ ಈಗ ಫಜೀತಿಗೆ ಕಾರಣ. 2000ದಲ್ಲಿ ಬಾಲ್ಮರ್‌ಗೆ ಸಿಇಓ ಸ್ಥಾನ ಬಿಟ್ಟುಕೊಟ್ಟ ಬಿಲ್ ಗೇಟ್ಸ್, 2008ರಲ್ಲಿ ಕಂಪೆನಿಯ ದಿನನಿತ್ಯದ ಕೆಲಸಗಳಿಂದ ದೂರ ಉಳಿದರು. ಆದರೆ ಚೇರ್‌ಮನ್‌ಗೆ ಇರುವ ಅಪಾರ ಅಧಿಕಾರಗಳು ಇನ್ನೂ ಅವರಲ್ಲೇ ಉಳಿದಿವೆ.

ಕಳೆದ ಆರ್ಥಿಕ ವರ್ಷದಲ್ಲಿ ಕಂಪೆನಿ 73 ಶತಕೋಟಿ ಡಾಲರ್ ಆದಾಯ ಗಳಿಸಿದೆ. ವಿದೇಶಿ ಷೇರುಗಳಲ್ಲಿ 70 ಶತಕೋಟಿ ಡಾಲರ್ ಹೂಡಿಕೆ ಮಾಡಿದ್ದು ಅದಕ್ಕೆ ತೆರಿಗೆ ಕಟ್ಟಬೇಕಿಲ್ಲ. ಅಂದರೆ ಆ ಹಣವನ್ನು ಯಾವತ್ತು ಬೇಕಿದ್ದರೂ ನಗದು ಮಾಡಿಕೊಳ್ಳಬಹುದು. ಕೋಕಾಕೋಲ, ಕಾಲ್ಗೇಟ್ ಮುಂತಾದ ಕಂಪೆನಿಗಳು ಈ ರೀತಿಯ 'ರೆಡಿ ನಗದು' ಮೀಸಲನ್ನು ಡಿವಿಡೆಂಡ್ ರೂಪದಲ್ಲಿ ಷೇರುದಾರರಿಗೆ ನೀಡುತ್ತವೆ. ಆದರೆ ಮೈಕ್ರೊಸಾಫ್ಟ್ ಮಾಡುತ್ತಿಲ್ಲ. ಅದೇ ಷೇರುದಾರರ ಕೋಪಕ್ಕೆ ಕಾರಣ! ಗೇಟ್ಸ್ ತ್ಯಜಿಸಿದರೆ ಕಂಪೆನಿಯ ಷೇರುಗಳ ಬೆಲೆ ಏರುತ್ತದೆ ಎನ್ನುವುದು ಮಾರುಕಟ್ಟೆ ತಜ್ಞರ ವಾದ. 'ಅದು ಸ್ವಲ್ಪ ಕಾಲ. ಆಮೇಲೆ ಕಂಪೆನಿಯನ್ನು ಅಸ್ಥಿರತೆ ಕಾಡುತ್ತದೆ' ಎನ್ನುವುದು ಬಲ್ಲವರ ಎಚ್ಚರಿಕೆ. ಗೇಟ್ಸ್ ಪದಚ್ಯುತಿ ಆಗಬಹುದೆ? 'ಗೇಟ್ಸ್ ಮನಸ್ಸು ಮಾಡಿದರೆ ಮಾತ್ರ ಆಗಬಹುದು' ಎನ್ನುವುದು ಇಲ್ಲಿನ ವಿಶೇಷ.

## ಮಲಾಲಾಮಯ



ಎಲ್ಲೆಲ್ಲೂ ಮಲಾಲಾ ಸುದ್ದಿಯೇ. ಯೂರೋಪಿಯನ್ ಪಾರ್ಲಿಮೆಂಟ್ 'ಮುಕ್ತ ಅಭಿವ್ಯಕ್ತಿ'ಗಾಗಿ ನೀಡುವ ಪ್ರತಿಷ್ಠಿತ ಸಖರೋವ್ ಮಾನವ ಹಕ್ಕು ಪ್ರಶಸ್ತಿಯೂ ಇದೀಗ ಮಲಾಲಾ ಯೂಸುಫ್‌ಝೈ ಗೆ ಸಂದಿದೆ. ದೈತ್ಯ ಅಮೆರಿಕ ಸರಕಾರವನ್ನು ಎದುರು ಹಾಕಿಕೊಂಡು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹೋರಾಡುತ್ತಿರುವ ವಿಕಿಲೀಕ್ಸ್ ಸ್ಥಾಪಕ ಎಡ್ವರ್ಡ್ ಸ್ನೋಡೆನ್‌ನನ್ನೂ ಅಂತಿಮ ಸುತ್ತಿನಲ್ಲಿ ಹಿಂದಿಕ್ಕಿ ಮಲಾಲಾ ಈ ಪ್ರಶಸ್ತಿ ಪಡೆದಿದ್ದಾಳೆ.

ಹೆಣ್ಣುಮಕ್ಕಳ ಶಿಕ್ಷಣದ ಹಕ್ಕಿಗೆ ಧ್ವನಿಯೆತ್ತಿದ ಮಲಾಲಾ, ತಾಲಿಬಾನ್‌ನ ಕೊಲೆ ಯತ್ನದಿಂದ ಪಾರಾಗಿ ಇಂಗ್ಲೆಂಡ್ ತಲುಪಿದ್ದೇ ದೊಡ್ಡ ಸಾಧನೆ. ಈಗಲೂ ಆಕೆ ಬೆದರಿಕೆಯಿಂದ ಮುಕ್ತರಾಗಿಲ್ಲ. ಆದರೆ ಈ ಬೆದರಿಕೆಗಳು ಆಕೆಯನ್ನು ಇನ್ನಷ್ಟು ಗಟ್ಟಿ ಮಾಡಿವೆ.

ನೋಬೆಲ್ ಶಾಂತಿ ಪ್ರಶಸ್ತಿಗೂ ಮಲಾಲಾ ಹೆಸರಿತ್ತು. ಆದರೆ ಸ್ವಲ್ಪದರಲ್ಲಿ ಆಕೆ ಈ ಪ್ರಶಸ್ತಿಯನ್ನು ತಪ್ಪಿಸಿಕೊಂಡಿದ್ದಾಳೆ. ಈ ಹಿಂದೆ ಸಖರೋವ್ ಪ್ರಶಸ್ತಿ ಪಡೆದ ನೆಲ್ಸನ್ ಮಂಡೇಲ ಮತ್ತು ಆಂಗ್ ಸಾನ್ ಸೂ ಕಿ, ಆ ಬಳಿಕ ನೋಬೆಲ್ ಶಾಂತಿ ಪ್ರಶಸ್ತಿ ಪಡೆದಿದ್ದರು. ಮಲಾಲಾಗೆ ಸದ್ಯಕ್ಕೆ ಆ ಅದೃಷ್ಟವಿಲ್ಲ.

ಇನ್ನೂ 16ರ ಹರೆಯದ ಈ ಬಾಲೆ (ಬರ್ತ್‌ಡೇ 12/7/1997) ಮುಂದೆಯೂ ನೋಬೆಲ್ ಶಾಂತಿ ಪ್ರಶಸ್ತಿ ಪಡೆಯಬಹುದು. ಅದಕ್ಕೂ ಮುನ್ನ ಆಕೆಗೆ ಪಾಕಿಸ್ತಾನದ ಪ್ರಧಾನಿ ಆಗುವ ಕನಸೂ ಇದೆಯಂತೆ! 'ಎಲ್ಲ ಹೆಣ್ಣುಮಕ್ಕಳಿಗೂ ಶಿಕ್ಷಣ ಸಿಗಬೇಕು' ಎನ್ನುವುದೇ ಆಕೆಯ ಧ್ಯೇಯವಾಕ್ಯ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65